# ಜಿಲ್ಲಾಧಿಕಾರಿ ಹಾಗೂ ಗ್ರಾಮ ಲೆಕ್ಕಾಧಿಕಾರಿ ನೇರ ನೇಮಕಾತಿ ಪ್ರಾಧಿಕಾರ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

**ನಂ. ಸಿಬ್ಬಂದಿ (1) ಎಪಿಪಿ ಸಿ.ಆರ್ 31/2019-20, ದಿನಾಂಕ: 17-03-2020**

## // ಪತ್ರಿಕಾ ಪ್ರಕಟಣೆ-//

2019-20ನೇ ಸಾಲಿನ ಶಿವಮೊಗ್ಗ ಜಿಲ್ಲಾ ಕಂದಾಯ ಘಟಕದ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಯ. ದಾಖಲಾತಿ ಪರಿಶೀಲಿನೆಗೆ 1:10 ಅನುಪಾತದಲ್ಲಿ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು http://shivamogga.nic.in ವೆಬ್ ಸೈಟ್ ಮೂಲಕ ಪ್ರಕಟಿಸಲಾಗಿದೆ. ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಯನ್ನು ದಿನಾಂಕ: **23-03-2020**ರಂದು ನಿಗದಿಪಡಿಸಲಾಗಿತ್ತು. ಕೋವಿಡ್-19 (ಕೊರೋನಾ ವೈರಸ್ 2019) ರ ಹರಡುವಿಕೆಯನ್ನು ತಡೆಗಟ್ಟಲು ಸಾರ್ವಜನಿಕ ಹಿತದೃಷ್ಟಿಯಿಂದ ಈ ಕಛೇರಿಯಲ್ಲಿ ದಿನಾಂಕ: 23-03-2020 ರಂದು ದಾಖಲಾತಿ ಪರಿಶೀಲನಾ ದಿನಾಂಕವನ್ನು ಮುಂದಿನ ಆದೇಶವಾಗುವವರೆಗೆ ಮುಂದೂಡ ಲಾಗಿದೆ. ಪರಿಷ್ಕೃತ ದಿನಾಂಕವನ್ನು ನಿಗದಿಪಡಿಸಿ ಈ ಕಛೇರಿಯ ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸಲಾಗುವುದು.

K. B. [signature]
ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು.
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಸಮಿತಿ
ಶಿವಮೊಗ್ಗ ಜಿಲ್ಲೆ,ಶಿವಮೊಗ್ಗ.

ಪ್ರತಿಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ಜಿಲ್ಲಾ ಮಾಹಿತಿ ಅಧಿಕಾರಿ, ಜಿಲ್ಲಾ ಸೂಚನಾ ವಿಜ್ಞಾನ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗರವರಿಗೆ ಕಳಿಸುತ್ತಾ ಈ ಪತ್ರಿಕಾ ಪ್ರಕಟಣೆಯನ್ನು ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸುವಂತೆ. ಹಾಗೂ 1:10 ಅನುಪಾತದ 690 ಅಭ್ಯರ್ಥಿಗಳಿಗೆ ಮೇಸೇಜ್ (ಸಂದೇಶ) ಮುಖಾಂತರ ದಾಖಲೆಗಳ ಪರಿಶೀಲನೆ ದಿನಾಂಕ ಮುಂದೂಡಿದ ಮಾಹಿತಿಯನ್ನು ಕಳುಹಿಸುವಂತೆ ಸೂಚಿಸಿದೆ.
2. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಶಿವಮೊಗ್ಗ ರವರಿಗೆ ಕಳುಹಿಸುತ್ತಾ ಸದರಿ ಪ್ರಕಟಣೆಯನ್ನು ಎಲ್ಲಾ ದಿನಪತ್ರಿಕೆಯಲ್ಲಿ ಹಾಗೂ ಟಿ.ವಿ ಮಾಧ್ಯಮ ದಲ್ಲಿ ಈ ದಿನವೇ ಪ್ರಚಾರ ಪಡಿಸುವಂತೆ ಕೋರಿದೆ.
3. ಸಹಾಯಕ ನಿರ್ದೇಶಕರು ಅಕಾಶವಾಣಿ ಭದ್ರಾವತಿರವರಿಗೆ ಈ ಪ್ರಕಟಣೆಯನ್ನು ಸುದ್ದಿ ಮಾಧ್ಯಮ ದಲ್ಲಿ ಬಿತ್ತರಿಸಲು ಕೋರಿದೆ.